# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 767 |
| 2. ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3. ಉತ್ತರಿಸಬೇಕಾದ ದಿನಾಂಕ | : | 12-12-2023 |
| 4. ಉತ್ತರಿಸುವವರು | : | ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ಮಹಾನಗರಕ್ಕೆ 24x7 ಕುಡಿಯುವ ನೀರು ಸರಬರಾಜು ಕಾರ್ಯವನ್ನು ಯಾವ ಕಂಪನಿಗೆ ವಹಿಸಲಾಗಿದೆ. | ಕೆಯುಡಬ್ಲ್ಯೂಎಸ್ಎಂಪಿ ಯೋಜನೆಯಡಿ ಕಲಬುರಗಿ ನಗರಕ್ಕೆ 24x7 ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಅನುಷ್ಠಾನ ಮತ್ತು ಕಾರ್ಯಾಚರಣೆ & ನಿರ್ವಹಣೆಗಾಗಿ ಮೆ\|\| ಎಲ್&ಟಿ ಲಿಮಿಟೆಡ್ ಚೆನ್ನೈ ಇವರಿಗೆ ಕಾಮಗಾರಿಯ ಗುತ್ತಿಗೆಯನ್ನು ನೀಡಲಾಗಿದೆ. |
| ಆ) | ಸದರಿ ಕಂಪನಿ ಗುತ್ತಿಗೆ ಪಡೆಯುವಾಗ ಕಾರ್ಯ ಮುಗಿಸಲು ನಿಗಧಿಪಡಿಸಿರುವ ಕಾಲಾವಧಿ ಎಷ್ಟು; ಹಾಗೂ ಪ್ರಸ್ತುತ ಎಷ್ಟು ವಾರ್ಡ್ ಗಳಿಗೆ 24x7 ಶುದ್ಧ ಕುಡಿಯುವ ನೀರು ಪೂರೈಸಲಾಗುತ್ತಿದೆ; ಈ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಲಾಗುತ್ತದೆ; | ಮೆ\|\| ಎಲ್&ಟಿ ಲಿಮಿಟೆಡ್ ಚೆನ್ನೈ ರವರಿಗೆ ಕರಾರಿನಂತೆ ವಿನ್ಯಾಸ ನಿರ್ಮಾಣ ಕಾಮಗಾರಿಯ ಅವಧಿಯು ಒಳಗೊಂಡಂತೆ ಕಾರ್ಯಾಚರಣೆ ಮತ್ತು ನಿರ್ವಹಣೆಯ ಕಾಲವದಿಯ ನ್ನು 11.5 ವರ್ಷಗಳಾಗಿರುತ್ತದೆ.<br><br>ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 2008 ರಿಂದ ಮೆ\|\| ವಿಯೋಲಿಯಾ ಇಂಡಿಯಾ ಪ್ರೈ ಲಿಮಿಟೆಡ್ ರವರಿಂದ ಅನುಷ್ಠಾನಗೊಳಿಸಿದ 24x7 ಪ್ರಾತ್ಯಕ್ಷಿಕ ವಲಯಗಳಲ್ಲಿ ಬರುವ ವಾರ್ಡ್ ಸಂಖ್ಯೆ: 17, 23, 44, 33 ಗಳಲ್ಲಿ ಪೂರ್ಣ ಪ್ರಮಾಣವಾಗಿ ಹಾಗೂ ವಾರ್ಡ್ ಸಂಖ್ಯೆ: 24, 6, 19, 32, 42, 43, 49 ಗಳಲ್ಲಿ ಭಾಗಶಃ ಕುಡಿಯುವ ನೀರನ್ನು ಪ್ರಸ್ತುತ ಪೂರೈಸಲಾಗುತ್ತಿದೆ.<br><br>ನಿರ್ಮಾಣ ಕಾಮಗಾರಿಯು ಕರಾರಿನಂತೆ ಜೂನ್ - 2025ಕ್ಕೆ ಪೂರ್ಣಗೊಳ್ಳಲಿದೆ. |
| ಇ) | ಕಲಬುರಗಿ ಮಹಾನಗರದ ಕೆಲವು ವಾರ್ಡ್ ಗಳಲ್ಲಿ ಒಳಚರಂಡಿಯ ವ್ಯವಸ್ಥೆ ಸರಿಯಾಗಿ ನಿರ್ವಹಣೆ ಮಾಡದಿರುವುದರಿಂದ ಒಳಚರಂಡಿಯ ಅಶುದ್ಧ ನೀರು ರಸ್ತೆ ಮೇಲೆ ಹರಿದು ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು : (ಮಾಹಿತಿ ನೀಡುವುದು) | ಬಂದಿರುವುದಿಲ್ಲ<br>ಒಳಚರಂಡಿ ಜಾಲದ ದೈನಂದಿನ ನಿರ್ವಹಣೆಗೆ (Machine hole, Over flow, ULD line Blockage) ಗಳಂತಹ ನಿರ್ವಹಣೆ ಕಾರ್ಯವನ್ನು 5 ಪಾಲಿಕೆ ಒಡೆತನದ Jetting cum Sucking Machineಗಳನ್ನು ಬಳಸಿ ಕೈಗೊಳ್ಳಲಾಗುತ್ತಿದೆ.<br>ಒಳಚರಂಡಿ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ವಲಯವಾರು ನಿರ್ವಹಣೆ ಹಾಗೂ ಕಾರ್ಯಚರಣೆ ಟೆಂಡರ್ ಗಳನ್ನು ಪ್ರಕಟಿಸಲಾಗಿದೆ. NCAP ಹಾಗೂ 15ನೇ ಹಣಕಾಸಿನ ಅನುದಾನದಲ್ಲಿ ಒಳಚರಂಡಿ ನಿರ್ವಹಣೆ ವಾಹನಗಳ ಖರೀದಿಗೆ ಅನುದಾನ ಪಡೆದು ಕ್ರಮವಹಿಸಲಾಗಿರುತ್ತದೆ. |
| ಈ) | ಕಲಬುರಗಿ ಮಹಾನಗರ ಈಗಾಗಲೇ ಬೃಹದಾಕಾರವಾಗಿ ಬೆಳೆದಿದ್ದು, ಕಲ್ಯಾಣ ಕರ್ನಾಟಕದ ವಿಭಾಗೀಯ ಕೇಂದ್ರ ಆಗಿರುವುದರಿಂದ ಇಲ್ಲಿ ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ಈ ಮಹಾನಗರವನ್ನು ಸ್ಮಾರ್ಟ್ ಸಿಟಿ ಯೋಜನೆ ವ್ಯಾಪ್ತಿಗೆ ಸೇರಿಸಲು ಸರ್ಕಾರ ಚಿಂತನೆ ಮಾಡಿದೆಯೇ; ಹಾಗಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮಗಳೇನು : (ಮಾಹಿತಿ ನೀಡುವುದು) | ಇಲ್ಲ |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಉ) | ಕಲಬುರಗಿ ಮಹಾನಗರಕ್ಕೆ ಹೊಂದಿಕೊಂಡು ಸುತ್ತಲೂ ಹಲವಾರು ಖಾಸಗಿ ಬಡಾವಣೆಗಳು ತಲೆ ಎತ್ತಿದ್ದು, ಇಲ್ಲಿ ರಸ್ತೆ, ವಿದ್ಯುತ್, ಕುಡಿಯುವ ನೀರು, ಒಳಚರಂಡಿ ಇತ್ಯಾದಿ ಮೂಲಭೂತ ಸೌಕರ್ಯಗಳು ಇಲ್ಲದೆ, ಈ ಬಡಾವಣೆಗಳು ಮಹಾನಗರ ವ್ಯಾಪ್ತಿಗೆ ಸೇರದೇ ಇರುವುದರಿಂದ ಅವುಗಳ ನಾಗರಿಕ ಸೌಲಭ್ಯಗಳಿಂದ ವಂಚಿತವಾಗಿದ್ದು, ಈ ಎಲ್ಲಾ ಬಡಾವಣೆಗಳು ಒಳಗೊಂಡಂತೆ ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಯನ್ನು ವಿಸ್ತರಿಸುವ ಚಿಂತನೆ ಸರ್ಕಾರದ ಮಟ್ಟದಲ್ಲಿದೆಯೇ ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ಮಾಹಿತಿ ನೀಡುವುದು) | ಇಲ್ಲ |

ಕಡತ ಸಂಖ್ಯೆ: ನಅಇ 183 ಪಿ.ಆರ್.ಜೆ 2023

11/12/2023

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು